**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 27/2018.**

**ಚಾಸಾ-06**

**ಪ್ರಾಸಾ-02**

**ದಿನಾಂಕಃ 07-11-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಮಹೇಶ ತಂಃ ಚಂದ್ರಯ್ಯ ಹಿರೇಮಠ |
| ವಯಸ್ಸು | ಃ 50 ವರ್ಷ |
| ಉದ್ಯೋಗ | ಃ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ |
| ವಾಸ | ಃ ಧಾರವಾಡ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ನಾನು 2012 ರಿಂದ 2015 ರ ವರೆಗೆ ದಾಂಡೇಲಿ ವಲಯ ಕಚೇರಿಯಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 20-03-2014 ರಂದು ರಾತ್ರಿ 08-00 ಗಂಟೆಗೆ ಚಾಸಾ-4 ರವರು ಕೆರವಾಡ ಗ್ರಾಮದ ಒಬ್ಬ ವ್ಯಕ್ತಿಯ ಮೇಲೆ ದಾಳಿ ಮಾಡಿ, ನನಗೆ 2 ಸಾಗುವಾನಿ ನಗಗಳನ್ನು ಮತ್ತು 4 ಸಿಸಂನ ಹಲಗೆಗಳನ್ನು, ಒಂದು ಬಾಚಿ, ಒಂದು ಗರಗಸ, ಪ್ರ.ವ.ವರದಿ, ಸ್ಥಳ ಪಂಚನಾಮೆ ಮತ್ತು ಜಪ್ತು ಪಡಿಸಿದ ಸ್ವತ್ತಿನ ವರದಿಯನ್ನು ನೀಡಿ, ನನ್ನ ಸಮಕ್ಷಮ ಆರೋಪಿತನಾದ ಗುಂಡು ಕಲ್ಲಪ್ಪ ಗೊಂಡಾಳಕರ ಎನ್ನುವವರನ್ನು ಹಾಜರುಪಡಿಸಿದರು.
3. ನಂತರ ನಾನು ಸದರಿ ದಾಖಲೆಗಳನ್ನು ಮತ್ತು ವಸ್ತುಗಳನ್ನು ಪಡೆದು, ಪರಿಶೀಲನೆ ಮಾಡಿರುತ್ತೇನೆ ಮತ್ತು ಆರೋಪಿಯ ವಿಚಾರಣೆಯನ್ನು ಮಾಡಿರುತ್ತೇನೆ. ಆಗ ಸದರಿ ಆರೋಪಿಯು ಸದರಿ ಕಟ್ಟಿಗೆಗಳನ್ನು ಕಾಡಿನಿಂದ ತಂದಿರುವುದಾಗಿ ಒಪ್ಪಿಕೊಂಡು, ತನ್ನ

ಹತ್ತಿರ ಯಾವುದೇ ಪರವಾನಗಿ ಅಥವಾ ಅನುಮತಿ ಇಲ್ಲ ಎಂದು ತಿಳಿಸಿರುತ್ತಾನೆ ಮತ್ತು ತನ್ನ ತಪ್ಪನ್ನು ಒಪ್ಪಿಕೊಂಡು ಹೇಳಿಕೆಯನ್ನು ನೀಡಿರುತ್ತಾನೆ.

4. ನಂತರ ಆರೋಪಿಗೆ ಅವನು ಮಾಡಿದ ಅಪರಾಧದ ಬಗ್ಗೆ ಮಾಹಿತಿಯನ್ನು ನೀಡಿ, ಸೂಕ್ತ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

5. ನಂತರ ಘಟನಾ ಸ್ಥಳಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿರುತ್ತೇನೆ.

6. ದಿಃ 24-03-2014 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿರುತ್ತೇನೆ. ಚಾಸಾ-1, 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ, ಆತನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

7. ಸದರಿ ಕಟ್ಟಿಗೆಗಳು ಸಾಗುವಾನಿ ಮತ್ತು ಸಿಸಂ ಮರಗಳೇ ಎಂದು ನಾನು ಈಗ ನ್ಯಾಯಾಲಯಕ್ಕೆ ಒಂದು ವರದಿಯನ್ನು ನೀಡುತ್ತಿದ್ದು, ಸದರಿ ವರದಿಯನ್ನು ಆರೋಪಿ ಪರ ವಕೀಲರ ತಕರಾರಿನೊಂದಿಗೆ **ನಿಪಿ-3** ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

8. ಸಾಕ್ಷಿಯು ಗ್ರಾಮ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-4** ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ನ್ನು ನೋಡಿ ಗುರುತಿಸಿದ್ದು, ನಿಪಿ-2 ಇರುವ ಒಂದು ಸಿಡಿಯನ್ನು ನೋಡಿ ಗುರುತಿಸಿದ್ದರಿಂದ ಸಿಡಿಯನ್ನು **ನಿಪಿ-5** ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಹೆಚ್ ವಕೀಲರಿದ**

9. ಘಟನೆಯ ಸಂಪೂರ್ಣ ತನಿಖೆಯನ್ನು ನಾನೇ ಮಾಡಿರುತ್ತೇನೆ. ಪಂಚನಾಮೆಯನ್ನು ಬರೆದವರ ಕುರಿತ ತನಿಖೆಯನ್ನು ಮಾಡಿರುತ್ತೇನೆ. ಪಂಚನಾಮೆಯನ್ನು ನಮ್ಮ

ಸಿಬ್ಬಂದಿಯು ಬರೆದಿರುತ್ತಾರೆ. ಪಂಚನಾಮೆಯನ್ನು ಬರೆದವರಿಗೆ ವ್ಯಾಕರಣ ಬದ್ಧ ಕನ್ನಡ ಭಾಷೆ ಬರುತ್ತಿತ್ತು.

10. ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಸ್ತುಗಳನ್ನು ಮನೆಯ ಮುಂದೆ ಇಟ್ಟು ಪಂಚನಾಮೆಯನ್ನು ಮಾಡಿರುತ್ತಾರೆ. ವಸ್ತುಗಳನ್ನು ಜಪ್ತು ಮಾಡಿದ ಸ್ಥಳದಲ್ಲಿ ಪಂಚನಾಮೆ ಮಾಡದೆ ಎಲ್ಲಾ ವಸ್ತುಗಳನ್ನು ಒಂದೇ ಸ್ಥಳಕ್ಕೆ ಸ್ಥಳಾಂತರಿಸಿ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ. ಹಾಗೇ ಸ್ಥಳಾಂತರಿಸಿ ಕೊಟ್ಟಿ ಪಂಚನಾಮೆಯನ್ನು ನಮ್ಮ ಕಚೇರಿಯಲ್ಲಿಯೇ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯಲ್ಲಿ ಈಗಾಗಲೇ ವಸ್ತುಗಳನ್ನು ನನ್ನ ಸಮಕ್ಷಮ ಹಾಜರುಪಡಿಸಲಾಗಿದೆ ಎಂದು ಬರೆದ ಕಾರಣ, ಆರೋಪಿಯನ್ನು ನನ್ನ ಸಮಕ್ಷಮ ಹಾಜರುಪಡಿಸಿದ ಮೇಲೆ ಪಂಚನಾಮೆಯನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ.

11. ಮನೆಯ ಒಳಗೆ ಹೋಗಿ, ಶೋಧನೆ ಮಾಡಿಲು ನಾನೇ ಮೌಖಿಕವಾಗಿ ಚಾಸಾ-4 ರವರಿಗೆ ಅನುಮತಿಯನ್ನು ನೀಡಿರುತ್ತೇನೆ, ಆದರೆ ನ್ಯಾಯಾಲಯದಿಂದ ಅನುಮತಿಯನ್ನು ಪಡೆದಿಲ್ಲ.

12. ಸಾಕ್ಷಿಗೆ ನಿಪಿ-2 ಫೋಟೋವನ್ನು ತೋರಿಸಲಾಗಿ, ಅದನ್ನು ಚಾಸಾ-2 ರವರು ನಮ್ಮ ಕಚೇರಿಯ ಮುಂದೆ ತೆಗೆದಿರುತ್ತಾರೆ. ನಿಪಿ-2 ನ್ನು ರಾತ್ರಿ 08-00 ಗಂಟೆಗೆ ಅದೇ ದಿನ ತೆಗದಿರುತ್ತಾರೆ. ಚಾಸಾ-1, 4 ಮತ್ತು 5 ರವರ ಹೇಳಿಕೆಗಳನ್ನು ದಿಃ 21-03-2014 ರಂದು ಬೆಳಿಗ್ಗೆ 11-00 ಗಂಟೆಗೆ ಪಡೆದಿರುತ್ತೇನೆ.

ಪ್ರಃ ಯಾವ ಸಾಕ್ಷಿಯ ಹೇಳಿಕೆಯನ್ನು ಎಷ್ಟು ಗಂಟೆಗೆ ಯಾವಾಗ ತೆಗೆದುಕೊಂಡಿದ್ದೀರಿ?
ಸದರಿ ಪ್ರಶ್ನೆ ಸುಸಂಬಂಧಿತವಾಗದ ಕಾರಣ ತಿರಸ್ಕರಿಸಲಾಗಿದೆ.
ಪ್ರಃ ನೀವು ದಿಃ 24-03-2014 ರಂದು ಯಾರ ಜೊತೆ ಘಟನಾ ಸ್ಥಳಕ್ಕೆ ಹೋಗಿದ್ದೀರಿ?
ಉಃ ನಾನು ಮತ್ತು ಚಾಸಾ-1, 4 ರವರ ಜೊತೆ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ.
ಪ್ರಃ ಎಷ್ಟು ಗಂಟೆಗೆ
ಉಃ ಸಂಜೆ 04-30 ಕ್ಕೆ ಹೋಗಿರುತ್ತೇನೆ.
ಪ್ರಃ ನೀವು ಹೋದಾಗ ಎಲ್ಲಿ, ಏನು ಇತ್ತು?

ಉಃ ಅಲ್ಲಿ ಒಂದು ಮನೆ ಮತ್ತು ದನದ ಕೊಟ್ಟಿಗೆ ಇತ್ತು, ಅವೆರಡೂ ತಾಗಿಕೊಂಡು ಇದ್ದವು.
ಪ್ರಃ ತನಿಖಾ ಅವಧಿಯಲ್ಲಿ ಸದರಿ ಕಟ್ಟಿಗೆಗಳನ್ನು ಆರೋಪಿ ಎಲ್ಲಿಂದ ತಂದಿರುತ್ತಾನೆ ಎಂದು ವಿಚಾರಣೆ ಮಾಡಿದ್ದೀರಾ?
ಉಃ ತನಿಖೆ ಮಾಡಿರುತ್ತೇನೆ. ಜಪ್ತು ಮಾಡಿದ ವಸ್ತುಗಳು ಹಲಗೆ ಮತ್ತು ನಗಗಳು ಆದ ಕಾರಣ, ನನಗೆ ಆರೋಪಿ ಯಾವ ಸ್ಥಳದಿಂದ ಕಟ್ಟಿಗೆಗಳನ್ನು ಕಡಿದು ತಂದಿರುತ್ತಾನೆ ಎಂದು ಹೋಲಿಕೆ ಮಾಡಲು ಆಗಲಿಲ್ಲ.
ಪ್ರಃ ನೀವು ಆರೋಪಿಯನ್ನು ಕಟ್ಟಿಗೆಗಳನ್ನು ಎಲ್ಲಿಂದ ತಂದಿದ್ದೀರಿ ಎಂದು ವಿಚಾರಣೆ ಮಾಡಿದ್ದೀರಾ?
ಉಃ ಮಾಡಿರುತ್ತೇನೆ, ಅರಣ್ಯ ಪ್ರದೇಶದಿಂದ ಎಂದು ಹೇಳಿರುತ್ತಾನೆ.
ಪ್ರಃ ಸದರಿ ಕಟ್ಟಿಗೆಗಳ ಬುಡಚಿಯ ಬಗ್ಗೆ ಪಂಚನಾಮೆಯನ್ನು ಮಾಡಿದ್ದೀರಾ?
ಉಃ ಮಾಡಿಲ್ಲ, ಏಕೆಂದರೆ ಆರೋಪಿ ವಿಚಾರಣೆಯಲ್ಲಿ ತಾನು ಎಲ್ಲಿಂದ ಕಟ್ಟಿಗೆಗಳನ್ನು ಕಡಿದು ತಂದಿದ್ದೇನೆ ಎಂದು, ರಾತ್ರಿಯಾದ ಕಾರಣ ಗೊತ್ತಿಲ್ಲ ಎಂದು ಹೇಳಿರುತ್ತಾನೆ.

13. ಈ ಪ್ರಕರಣದಲ್ಲಿ ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಮತ್ತು ಅವುಗಳನ್ನು ಸೃಷ್ಟಿಸಾಗಿದೆ ಎಂದರೆ ಸರಿಯಲ್ಲ. ಸಿಸಂನ ಕಟ್ಟಿಗೆಗಳನ್ನು ಒಬ್ಬ ವ್ಯಕ್ತಿಯಿಂದ ನಿಪಿ-2 ರಲ್ಲಿ ಕಾಣುವಂತೆ ಗರಗಸದಿಂದ ತುಂಡು ಮಾಡಲ ಸಾದ್ಯವಿಲ್ಲ ಎಂದರೆ ಸರಿಯಲ್ಲ.

14. ಆರೋಪಿಗೂ ಈ ಪ್ರಕರಣದಲ್ಲಿ ಜಪ್ತು ಮಾಡಿದ ವಸ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾರಸುದಾರರು ಅಥವಾ ಆರೋಪಿತರು ಸಿಗದಂತಹ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ದುರಪಯೋಗಪಡಿಸಿಕೊಂಡು ಆರೋಪಿಯ ವಿರುದ್ಧ ಸಲ್ಲಿಸಿದ ಸುಳ್ಳ ದೂರಿಗೆ ಅನುಕೂಲವಾಗುವ ರೀತಿ ತನಿಖೆಯನ್ನು ಸರಿಯಾಗಿ ಮಾಡದೆ, ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೆ ಗುನ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ
ಸಹಿ ಇದೆ/-
(ತೇಜಸ್ವಿನಿ ಸೊಗಲದ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.